ಕಾರ್ಯದರ್ಶಿ;—ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ೧೯೮೮ನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಳಿಯ ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ

ಉಪಾಧ್ಯಕ್ಷರು;—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

೧) ಹಾನಗಲ್ ತಾಲ್ಲೂಕಿನ ಶೇಷಗಿರಿಯಲ್ಲಿ ಹಿಂದುಳಿದ ವರ್ಗದವರಿಗೆ ಹಾಸ್ಟಲನ್ನು ಮಂಜೂರು ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಕೆ. ಹೆಚ್. ಪಾಟೀಲ್.—ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕು ಶೇಷಗಿರಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ಹಾಸ್ಟೆಲ್‌ನ್ನು ಮಂಜೂರು ಮಾಡುವಲ್ಲಿ ಆಗಿರುವ ವಿಳಂಬದ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು)—ಮಾನ್ಯ ಪಾಟೀಲ್‌ರವರು ಧಾರವಾಡ ಜಿಲ್ಲೆಯಲ್ಲಿ ಹಾನಗಲ್ ತಾಲ್ಲೂಕಿನ ಶೇಷಗಿರಿಯಲ್ಲಿ ಗ್ರಾಂಟ್ ಇನ್ ಏಡ್ ಹಾಸ್ಟೆಲ್‌ನ್ನು ಹಿಂದುಳಿದ ವರ್ಗಗಳವರ ಮಕ್ಕಳಿಗಾಗಿ ಮಂಜೂರು ಮಾಡಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದೇನೆಂದು ಹೇಳಿದ್ದಾರೆ. ಆ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ. ಆದಷ್ಟು ಬೇಗ ಹಿಂದುಳಿದ ವರ್ಗಗಳವರ ಮಕ್ಕಳಿಗೆ ಅನುಕೂಲವಾಗುವಂತೆ ಖಾಸಗಿ ಅನುದಾನ ವಿದ್ಯಾರ್ಥಿನಿಲಯವನ್ನು ಕೊಡಲಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ಡಿ. ಟಿ. ಜಯಕುಮಾರ್, ಚಿಕ್ಕಬೋರಯ್ಯ ಹಾಗೂ ವೇದಾಂತ ಹೆಬ್ಬಿಗೆಯವರು ಗಮನ ಸೆಳೆದಿರುವ ವಿಚಾರವನ್ನು ಮಂತ್ರಿಗಳು ಬಂದ ಮೇಲೆ ತೆಗೆದುಕೊಳ್ಳಿ.

೨) ನಗರ ಯೋಜನೆಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಹಾಗೂ ಬಡ್ತಿ ಮಾಡುವಲ್ಲಿ ನಿಮ್ನ ವರ್ಗದವರಿಗೆ ಅನ್ಯಾಯವಾಗಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ರಾಜ್ಯದ ನಗರ ಯೋಜನೆಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಮಾಡುವಲ್ಲಿ ಹಾಗೂ ಬಡ್ತಿ ನೀಡುವಲ್ಲಿ ನಿಮ್ನ ವರ್ಗದ ಹಾಗೂ ಪಂಗಡದವರಿಗೆ ಆದ ಅನ್ಯಾಯದ ಬಗ್ಗೆ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಹಾಗೂ ನಗರಾಭಿವೃದ್ಧಿ ಸಚಿವರು).—

೧. ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕಾತಿ :

ಸರ್ಕಾರಿ ಆದೇಶದ ಕ್ರ ಸಂ. ಡಿಪಿಎಆರ್-೧-ಎಸ್‌ಬಿಸಿ-೭೭, ದಿನಾಂಕ ೪-೩-೧೯೭೭ ಅನ್ವಯ ಈ ಇಲಾಖೆಯಲ್ಲಿ ಖಾಲಿ ಬಿದ್ದ ಹುದ್ದೆಗಳನ್ನು ನಿಮ್ನ ವರ್ಗ ಮತ್ತು ಇತರ ವರ್ಗಗಳಿಗೆ ನಿರ್ಧರಿಸಿದ ಮೀಸಲಾತಿಯ ವಿಂಗಡಿಸಿ, ಕರ್ನಾಟಕ ಲೋಕಸೇವಾ ಆಯೋಗ ಹಾಗೂ ನೇಮಕಾತಿ ಸಮಿತಿಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ. ಅರ್ಹರಾದ ಅಭ್ಯರ್ಥಿಗಳ ಪಟ್ಟಿಯ ಅನ್ವಯ ನೇಮಕಾತಿ ಮಾಡಲಾಗಿದೆ. ಅದೇ ರೀತಿ 'ಡಿ' ದರ್ಜೆಗೆ ಸೇರಿದ ಹುದ್ದೆಗಳನ್ನು ಸರ್ಕಾರಿ ಆದೇಶದ ದಿನಾಂಕ ೪-೩-೭೭ರ ಅನ್ವಯ ವಿಂಗಡಿಸಿ, ಜಿಲ್ಲಾ ವಿನಿಮಯ ಉದ್ಯೋಗ ಸಂಸ್ಥೆಯಿಂದ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲಾಗಿದೆ.

ಆದ್ದರಿಂದ ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕಾತಿಯಲ್ಲಿ ಯಾವ ನಿಯಮದ ಉಲ್ಲಂಘನೆ ಮಾಡಿರುವುದಿಲ್ಲ.